JETIR.ORG ISSN: 2349-5162 | ESTD Year : 2014 | Monthly Issue

JOURNAL OF EMERGING TECHNOLOGIES AND INNOVATIVE RESEARCH (JETIR)

An International Scholarly Open Access, Peer-reviewed, Refereed Journal

# ಪ್ರಾಚೀನ ಕರ್ನಾಟಕದ ಸಾಮಾಜಿಕ ಚರಿತ್ರೆ

**Dr Ramadasa Prabhu**
**Associate Professor**
**Department of History**
**Dr G Shankar Government Women's First Grade College and PG Study Centre Ajjarakadu Udupi**

**ABSTRACT**

ಆಧುನಿಕ ಪೂರ್ವ ಕರ್ನಾಟಕದ ಸಮಾಜದಲ್ಲಿ ಉಂಟಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಒಂದು ಪಕ್ಷಿನೋಟ ಮಾತ್ರವಿದೆ. ಚರಿತ್ರೆಯನ್ನು ಈ ದೃಷ್ಟಿಕೋನದಿಂದ ನೋಡಬೇಕೆಂಬುದೇ ಇಂದಿನ ಅಗತ್ಯತೆ. ಜಾತಿ, ಜನಾಂಗ, ಧರ್ಮ, ಭಾಷೆಗಳ ನಡುವೆ ದ್ವೇಷ ಸೃಷ್ಟಿಸುವ ರಾಜಕೀಯ ಚರಿತ್ರೆಯ ಬದಲಾಗಿ ನಮ್ಮಂತ ಜನಸಾಮಾನ್ಯರು ಬದುಕಿದ ಸಮಾಜ ಹೇಗಿತ್ತು ಎಂದು ತಿಳಿಯುವುದೇ ಉಪಯೋಗಕರ, ಸಾಮಾಜಿಕ ಚರಿತ್ರೆಯನ್ನು ನಾವು ನಮ್ಮ ಪಠ್ಯ ಪುಸ್ತಕಗಳಲ್ಲಿ ಅಳವಡಿಸುವ ಅಗತ್ಯವಿದೆ.

ಇತಿಹಾಸ ಅಂದರೆ ಅದು ಪ್ರತಿಯೊಂದು ತಲೆಮಾರಿನ ವರ್ತಮಾನ ಕಾಲ ಗತಕಾಲದೊಂದಿಗೆ ನಡೆಸುವ ಹೊಸ ಸಂವಾದ, ಹಾಗಾಗಿ ಪ್ರತಿಯೊಂದು ತಲೆಮಾರಿನ ಇತಿಹಾಸ ಬರವಣಿಗೆ ಹೊಸ ದೃಷ್ಟಿಕೋನ ಹೊಂದಿರಬೇಕು. ಯಾಕೆಂದರೆ ಹೊಸ ತಲೆಮಾರು ಹೊಸ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿರುತ್ತದೆ. ೧೯೬೦ರವರೆಗೂ ಇತಿಹಾಸ ರಾಜವಂಶಗಳನ್ನು ಕೇಂದ್ರಿಕರಿಸಿ ಚರ್ಚಿಸುತ್ತಿತ್ತು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಕೆಳವರ್ಗದ ಇತಿಹಾಸ ಪುನಃರಚನೆ ಮಾಡುವ ಕೆಲಸ ಚೆನ್ನಾಗಿ ನಡೆಯುತ್ತಿದೆ. ನಮ್ಮ ದೇಶದಲ್ಲಿ ಈ ಕೆಲಸವನ್ನು ಡಿ.ಡಿ.ಕೊಸಾಂಬಿ, ಆರ್.ಎಸ್.ಶರ್ಮ, ರೋಮಿಲಾ ಥಾಪರ್, ಇರ್ಫಾನ್ ಹಬೀಬ್ ಮತ್ತು ರಣಜಿತ್ ಗುಹಾರಂತಹ ದಿಗ್ಗಜರು ಅದ್ಬುತವಾಗಿ ಮಾಡಿದ್ದಾರೆ. ಭಾರತೀಯ ಸಮಾಜದ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ.

ಆದರೆ ಕರ್ನಾಟಕ ಇತಿಹಾಸದ ವಿಷಯಕ್ಕೆ ಬಂದರೆ ಸಾಮಾಜಿಕ ಇತಿಹಾಸದ ಪುನರ್ರಚನೆ ಕೆಲಸ ಏನೇನೂ ಸಾಲದು. ಅಲ್ಲೊಂದು ಇಲ್ಲೊಂದು ಕೆಲಸವಾಗಿದೆ ಬಿಟ್ಟರೆ ಸಮಗ್ರ ಕರ್ನಾಟಕದ ಸಾಮಾಜಿಕ ಇತಿಹಾಸ ರಚನಾ ಕೆಲಸವಾಗಲೇ ಇಲ್ಲ ಎನ್ನಬಹುದು. ನಮ್ಮ ಪಠ್ಯ ಪುಸ್ತಕಗಳು ಇನ್ನೂ ರಾಜವಂಶಗಳನ್ನು ಚರ್ಚಿಸುತ್ತವೆ. ಈ ಏಕಮುಖಿ ಮೇಲ್ಸ್ತರದ ಇತಿಹಾಸ ರಚನೆ ಜನರಿಗೆ ಅರ್ಥಹೀನವೆನಿಸಿದೆ. ಜನಸಾಮಾನ್ಯರು ಇದರಲ್ಲಿ ಕಾಣಿಸುವುದೇ ಇಲ್ಲ. ಇತಿಹಾಸದ ಬಗ್ಗೆ ವಿದ್ಯಾರ್ಥಿಗಳಿಗೂ ಆಸಕ್ತಿ ಕಡಿಮೆಯಾಗುತ್ತಿದೆ. ಆದುದರಿಂದ ಸಮಗ್ರ ಕರ್ನಾಟಕದ ಸಾಮಾಜಿಕ ಇತಿಹಾಸದ ಪುನರಚನೆ ಅತ್ಯಗತ್ಯವಾಗಿ ಆಗಬೇಕಿದೆ.

ನಮ್ಮ ಪಠ್ಯ ಪುಸ್ತಕಗಳಲ್ಲಿ ಸಾವಿರಾರು ವರ್ಷಗಳ ನಮ್ಮ ಸಮಾಜದ ಯಾವ ಹಂತ ನೋಡಿದರೂ ಅದು ಬದಲಾಗದ ಸ್ಥಿರ ನಾಲ್ಕು ವರ್ಣಗಳ ಸಮಾಜವಾಗಿತ್ತೆಂದು ಬರೆಯಲಾಗುತ್ತದೆ. ಹಾಗಾದರೆ ನಮ್ಮ ಕಣ್ಣ ಮುಂದೆ ಸಾವಿರಾರು ಜಾತಿಗಳು ಎಲ್ಲಿಂದ ಬಂದವು ಎಂಬುದು ನಮ್ಮನ್ನು ಚಕಿತಗೊಳಿಸುವುದಿಲ್ಲ.

ಇತಿಹಾಸದ ಚಕ್ರವನ್ನು ಸಾವಿರಾರು ವರ್ಷ ಚಲಿಸುವಂತೆ ಮಾಡಿದ ಜನಸಾಮಾನ್ಯರು ಇತಿಹಾಸದಲ್ಲಿ ಯಾಕೆ ಕಾಣಿಸುವುದಿಲ್ಲ. ಸಹಸ್ರ ವರ್ಷಗಳಲ್ಲೂ ನಮ್ಮ ಸಮಾಜ ಬದಲಾಗಿಲ್ಲವೆ? ಜಗತ್ತಿನ ಯಾವುದೇ ಸಮಾಜ ಸ್ಥಿರವಾಗಿರಲು ಸಾಧ್ಯವಿಲ್ಲ. ಮಾನವ ಸಮಾಜ ಯಾವತ್ತೂ ಚಲನಶೀಲ ಅದರ ಚಲನೆಯ ಗತಿಯನ್ನು ನಾವು ಅಧ್ಯಯನ ಮಾಡಿಲ್ಲ ಅಷ್ಟೆ

ಸಾಮಾಜಿಕ ಇತಿಹಾಸ ಸಂಶೋಧನೆಗೆ ಹೊರಡುವ ಪ್ರಾರಂಭದಲ್ಲಿ ನಾವು ನಮ್ಮ ಇತಿಹಾಸ ಸಂಶೋಧನಾ ವಿಧಾನವನ್ನು ಪರಿಷ್ಕರಿಸಿ ಕೊಳ್ಳಬೇಕಾಗುತ್ತದೆ. ಸಾಹಿತ್ಯ, ಶಾಸನ ಮತ್ತು ಪುರಾತತ್ವ ಆಕರಗಳಿಗೆ ನಾವು ಹೊಸ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಆಗ ದೊರಕುವ ಹೊಸ ಉತ್ತರಗಳಿಂದ ನಾವು ಸಾಮಾಜಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವುದು ಸಾಧ್ಯ. ಬರೇ ಸಾಹಿತ್ಯ ಮತ್ತು ಪುರಾತತ್ವ ಆಧಾರಗಳಿಂದ ಮಾತ್ರ ನಮ್ಮ ಸಂಶೋಧನೆ ಪರಿಪೂರ್ಣವಾಗಲಾರದು. ಇದಕ್ಕೆ ನಾವು ಡಿ.ಡಿ. ಕೊಸಾಂಬಿಯವರು ಹಾಕಿಕೊಟ್ಟ ನಮ್ಮ ದೇಶದ ಚರಿತ್ರೆಗೆ ಅನುಗುಣವಾದ ಸಂಶೋಧನೆ ವಿಧಾನವೊಂದನ್ನು ಬಳಸಿಕೊಳ್ಳುವ ಅಗತ್ಯವಿದೆ. ಯಾವುದೇ ದೇಶಕ್ಕೆ ಇಲ್ಲದ ಒಂದು ಅನುಕೂಲ ನಮ್ಮ ದೇಶದ ಚರಿತ್ರೆಗೆ ಇದೆ. ನಮ್ಮ ದೇಶ ಭೂತಕಾಲವನ್ನು ಹೊತ್ತುಕೊಂಡು ವರ್ತಮಾನಕ್ಕೆ ಕಾಲಿರಿಸಿದೆ. ಸಾವಿರಾರು ವರ್ಷಗಳ ಹಿಂದೆ ನಡೆದ ಸ್ಥಿತ್ಯಂತರ, ಸಂಘರ್ಷಗಳು ತಮ್ಮ ಕುರುಹುಗಳನ್ನು ಸಮಾಜದ ಪದರ ಪದರಗಳಲ್ಲಿ ಭದ್ರವಾಗಿ ಉಳಿಸಿಕೊಂಡು ಬಂದಿವೆ. ಇವು ಸೂಕ್ಷ್ಮದೃಷ್ಟಿಗೆ ಮಾತ್ರ ಕಾಣುತ್ತವೆ. ನಮ್ಮ ದೇಶದಲ್ಲಿ ಹೊಸ ವ್ಯವಸ್ಥೆ ಹಳೆಯ ವ್ಯವಸ್ಥೆಯನ್ನು ಸಂಪೂರ್ಣ ನಾಶ ಪಡಿಸಲಿಲ್ಲ. ಬದಲಿಗೆ ತನ್ನೊಳಗೆ ರೂಪಾಂತರಗೊಳಿಸಿ ಜೀರ್ಣಿಸಿಕೊಂಡಿದೆ. ಇಂತಹ ಗತದ ಛಾಯೆಗಳು ನಮ್ಮ ಮೌಖಿಕ ಸಾಹಿತ್ಯ, ಸ್ಥಳ ಪುರಾಣ, ದಂತಕಥೆ, ಮಿಥ್, ಆಚರಣೆ, ಸಂಪ್ರದಾಯ ಮತ್ತು ಲೋಕಾಚಾರ ಮುಂತಾದವುಗಳಲ್ಲಿ ಅಡಗಿದೆ. ಇವುಗಳನ್ನು ನೇರವಾಗಿ ಬಳಸದೇ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದರೆ ಪ್ರಾಚೀನ ಸಮಾಜದಲ್ಲಿ ನಡೆದ ಪಲ್ಲಟಗಳು ಗೋಚರಿಸುತ್ತವೆ. ಮೇಲಿನ ವಿಧಾನದಿಂದ ಹುಡುಕಾಟ ಮಾಡಿದಾಗ ಕರ್ನಾಟಕದ ಬಹುಮುಖ ಸಮಾಜ ನಮ್ಮೆದುರು ಅನಾವರಣಗೊಳ್ಳಲು ಸಾಧ್ಯ.

ಸಾಮಾನ್ಯವಾಗಿ ನಾವು ಮಹತ್ತರ ವಿಷಯಗಳಿಗಾಗಿ ಹುಡುಕಾಡುತ್ತಿರುತ್ತೇವೆ. ಆದರೆ ಸಾಮಾನ್ಯ ಸಂಗತಿಗಳು ಸಮಾಜದಲ್ಲಿ ಮಹತ್ತರ ಬದಲಾವಣೆಗಳನ್ನು ತರಬಲ್ಲವು ಎಂಬ ಗಮನವಿರಬೇಕು. ಮಾನವ ಮೂಲತಃ ಸಲಕರಣೆ ನಿರ್ಮಾಪಕ (Tool Maker) ಬೇರಾವ ಪ್ರಾಣಿಯೂ ಇದನ್ನು ಮಾಡದು. ಈ ಪ್ರವೃತ್ತಿಯೆ ಅವನನ್ನು ನಾಗರಿಕತೆಯತ್ತ ಕರೆದು ತಂದಿತು. ಇತಿಹಾಸ ಪೂರ್ವಕಾಲದ ಮಾನವನ ಶಿಲಾ ಆಯುಧಗಳನ್ನು ನಿರ್ಮಿಸುವ ಕೌಶಲ್ಯ ಅದೆಷ್ಟು ಬದಲಾವಣೆಯನ್ನು ಅವನ ಸಮಾಜದಲ್ಲಿ ತಂದಿತು ನೋಡಿ. ಪ್ರಾಣಿಗಳ ಬೇಟೆಯಾಡಿದ ನಂತರ ಪ್ರಾಣಿಗಳನ್ನು ಪಳಗಿಸಿ ಸಾಕಿದ. ಅದು ಪಶುಪಾಲನೆಗೆ ನಾಂದಿಯಾಯಿತು. ಆಮೇಲೆ ಸಸ್ಯಗಳನ್ನು ಪಳಗಿಸಿ ಕೃಷಿಯನ್ನು ಕಂಡು ಹಿಡಿದ. ಬರಬರುತ್ತಾ ಕೃಷಿಯನ್ನು ಪಶುಪಾಲನೆಯೊಂದಿಗೆ ಮಾಡಿದರೆ ಉಪಯೋಗಕರವೆಂದು ಕಂಡುಬಂತು. ಆಹಾರ ಮತ್ತು ಸಂತಾನೋತ್ಪತ್ತಿಗಾಗಿ ಬಳಕಯಾಗುತ್ತಿದ್ದ ಎತ್ತುಗಳ ಹೆಗಲಿಗೆ ನೊಗ ಕಟ್ಟಿ ನೇಗಿಲು ಎಳೆಯಲು ಬಂಡಿ ಎಳೆಯಲು ಯಾವ ಕ್ಷಣ ಪ್ರಾರಂಭಿಸಿದನೊ ಆಗಲೆ ಸಮಾಜದಲ್ಲಿ ದೊಡ್ಡ ಬದಲಾವಣೆಗಳು ಕಂಡು ಬಂದವು. ಮಾನವ ಶಕ್ತಿಯೊಂದಿಗೆ ಪಶುಶಕ್ತಿ ಸೇರಿದಾಗ ಪ್ರಕೃತಿಯ ಮೇಲೆ ಅವನ ಹಿಡಿತ ಪ್ರಬಲವಾಯಿತು. ಈಗವನು ವಿಸ್ತಾರವಾದ ಭೂಪ್ರದೇಶದಲ್ಲಿ ಕೃಷಿ ಮಾಡಬಲ್ಲ. ಇದರಿಂದ ಸೃಷ್ಟಿಯಾದ ಹೆಚ್ಚುವರಿ ಉತ್ಪಾದನೆ ವಿನಿಮಯಕ್ಕೆ ಮತ್ತು ನಂತರ ವ್ಯಾಪಾರಕ್ಕೆ ಕಾರಣವಾಗಿ ನಗರಗಳ ಬೆಳೆದು ನಗರೀಕರಣ ಮತ್ತು ನಾಗರಿಕತೆಗಳ ಸೃಷ್ಟಿಯಾಯಿತು. ಈ ಎಲ್ಲಾ ಸಾಧನೆಗೆ ರಾಜಮಹಾರಾಜರು ಕಾರಣರಲ್ಲ ಇದು ಜನಸಾಮಾನ್ಯರ ಸಾಧನೆಯಲ್ಲವೆ?

ಪ್ರಾಚೀನ ಸಮಾಜದಲ್ಲಿ ಬದಲಾವಣೆ ತಂದ ಇನ್ನೊಂದು ಅಂಶ ಕಬ್ಬಿಣದ ಲೋಹ ಪರಿಚಯವಾದದ್ದು. ಸುಮಾರು ೩೦೦೦ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಇದು ಬೆಳಕಿಗೆ ಬಂತು. ಹಲವು ಶತಮಾನಗಳವರೆಗೆ ಇದು ಯುದ್ಧೋಪಕರಣಗಳಿಗೆ ಮಾತ್ರ ಬಳಕೆಯಾಯಿತು. ನಂತರ ಕೃಷಿಯಲ್ಲಿ ಗುದ್ದಲಿ, ಕತ್ತಿ, ಮಚ್ಚು ನೇಗಿಲು ಮುಂತಾದ ಉಪಕರಣಗಳನ್ನು ಕಬ್ಬಿಣದಿಂದ ತಯಾರಿಸಲಾಯಿತು ಆಗ ಕಾಡು ಕಡಿಯಲು, ಬೇರುಗಳನ್ನು ಕೀಳಲು, ನೆಲ ಸಮತಟ್ಟುಗೊಳಿಸಲು ಗದ್ದೆಯನ್ನು ಆಳವಾಗಿ ಉಳುಮೆ ಮಾಡಲು, ಫಸಲುಕೊಯ್ಯಲು ಈ ಕಬ್ಬಿಣದ ಉಪಕರಣಗಳು ಉಪಯೋಗಿಯಾದವು. ಇದರ ಫಲವೇ ಕೃಷಿಕ ಸಮಾಜದ ತೀವ್ರ ವಿಸ್ತರಣೆ, ಗ್ರಾಮಗಳ ಸೃಷ್ಟಿ ಅರಣ್ಯ ಸಮುದಾಯಗಳ ಮೇಲೆ ಕೃಷಿಕ ಸಮಾಜದ ಬಲವಂತದ ವಿಸ್ತರಣೆ ಪ್ರಾರಂಭವಾಯಿತು. ಇದೆಲ್ಲದರ ಪರಿಣಾಮ ಉತ್ಪಾದನೆಯಲ್ಲಿ

ಹೆಚ್ಚಳ, ಸಮಾಜದಲ್ಲಿ ಖಾಸಗಿ ಆಸ್ತಿಯ ಸೃಷ್ಟಿ ಅದರಿಂದ ಬರುವ ವರ್ಗೀಕರಣ, ಶ್ರೇಣೀಕರಣ, ದುಡಿಮೆಗಾರರ ಶೋಷಣೆ ಒಂದು ಕಡೆಯಾದರೆ, ವ್ಯಾಪಾರಿ ವರ್ಗಗಳು ಶ್ರೇಣಿಗಳು, ಸಾರ್ಥವಾಹಗಳು, ನಗರಗಳ ಬೆಳವಣಿಗೆ ಇನ್ನೊಂದು ಪ್ರಕ್ರಿಯೆ. ಈ ತರಹದ ಇತಿಹಾಸ ನಾವು ವಿದ್ಯಾರ್ಥಿಗಳಿಗೆ ಕಲಿಸಲೇ ಇಲ್ಲ, ಇತಿಹಾಸ ಅಂದರೆ ಪರಸ್ಪರ ಸಂಬಂಧಗಳಿಲ್ಲದ ಘಟನೆಗಳ ಸರಮಾಲೆ ಅಲ್ಲ, ಅದೊಂದು ನಿರಂತರ ಪ್ರಕ್ರಿಯೆ ಎಂಬುದು ನಾವು ತಿಳಿಸಬೇಕಾಗಿದೆ.

## ಆದಿಮಾನವ ಸಲಕರಣೆ ನಿರ್ಮಾಣದತ್ತ ದಾಪುಗಾಲು ಹಾಕಿದಾಗ -Tool Making

ಕರ್ನಾಟಕದ ಕೃಷ್ಣ ತುಂಗಭದ್ರಾ, ಕಾವೇರಿ ನದಿ ಪ್ರದೇಶಗಳ ಸುತ್ತಮುತ್ತ ನವಶಿಲಾಯುಗದ (೨೫೦೦BC-೧೦೦೦BC) ಸಮಾಜಗಳು ನೆಲೆಸಿರುವುದು ಪುರಾತತ್ವ ದಾಖಲೆಗಳಿಂದ ತಿಳಿಯುತ್ತದೆ. ತೆಕ್ಕಲಕೋಟೆ, ಸಂಗನಕಲ್ಲು, ಬ್ರಹ್ಮಗಿರಿ, ಪಿಕ್ನಿಹಾಳ, ಕೊಡೆಕಲ್ಲು, ಮುಂತಾದ ಸ್ಥಳಗಳಲ್ಲಿ ಈ ಸಮಾಜವಿತ್ತು. ಈ ಹೊತ್ತಿಗಾಗಲೇ ಪ್ರಾಣಿಗಳನ್ನು ಪಳಗಿಸಿ, ಪಶುಪಾಲನೆ ಆರಂಭವಾಗಿತ್ತು, ಅಲ್ಪಸ್ವಲ್ಪ ಕೃಷಿ ತಿಳಿದಿತ್ತು. ಬುಟ್ಟಿ ಮಡಿಕೆ, ಶಿಲಾಆಯುಧಗಳ ತಯಾರಿ, ಗುಡಿಸಲು ಕಟ್ಟುವ ಕಲೆ ಮತ್ತು ಪಿತೃಪೂಜೆ ಈ ಸಮುದಾಯಗಳ ಲಕ್ಷಣವಾಗಿತ್ತು. ಈ ಹೊತ್ತಿಗಾಗಲೇ ಮೃದು ಲೋಹಗಳಾದ ಚಿನ್ನ, ತಾಮ್ರದ ಲೋಹಗಾರಿಕೆ ಅವರಿಗೆ ತಿಳಿದಿತ್ತು.

ಸುಮಾರು ಕ್ರಿಸ್ತಪೂರ್ವ ೧೦೦೦ ದಿಂದ ಕ್ರಿಸ್ತಪೂರ್ವ ಒಂದನೇ ಶತಮಾನದವರೆಗೆ ಕರ್ನಾಟಕದ ಎಲ್ಲಾ ಕಡೆ ನಾವು ಕಾಣುವುದು ಬೃಹತ್ ಶಿಲಾ ಸಮಾಧಿ (Megalithic Age) ಯುಗದ ಸಮಾಜ. ಇದು ಕಬ್ಬಿಣಯುಗ, ಈ ಕಾಲದಲ್ಲಿ ವಿವಿಧ ಬಗೆಯ ಶಿಲಾ ಸಮಾಧಿಗಳ ರಚನೆ ಮತ್ತು ಸಮಾದಿಗಳಲ್ಲಿ ಹೇರಳವಾದ ಕಬ್ಬಿಣದ ಆಯುಧಗಳು ಮಡಿಕೆಗಳು, ಪ್ರಾಣಿ ಅವಶೇಷಗಳು ನಮಗಿಂದು ಕಂಡುಬರುತ್ತವೆ. ಬಹುಶಃ ಈ ಸಮಾಧಿಗಳು ಸಾಮಾನ್ಯ ಜನರವಲ್ಲ. ಅಂದಿನ ಸಮುದಾಯಗಳನ್ನು ಮುನ್ನಡೆಸುತ್ತಿದ್ದ ನಾಯಕ(Chief) ರದ್ದಿರಬಹುದು. ಈ ಸಮಾಜ ಕೂಡ ಬೇಟೆ, ಪಶುಪಾಲನೆ,ಸಣ್ಣಪುಟ್ಟ ಸಸ್ಯಗಳನ್ನು ಪಳಗಿಸಿ, ಮಾಡಿದ ಕೃಷಿಯಿಂದ ಬದುಕುತ್ತಿದ್ದವು. ಆದರೆ ಈಗ ಜನವಸತಿ ನವಶಿಲಾಯುಗಕ್ಕಿಂತ ಹೆಚ್ಚು ವಿಸ್ತಾರವಾಗಿ ಹರಡಿದಂತೆ ಕಾಣುತ್ತದೆ. ಗುಡಿಕೈಗಾರಿಕೆಗಳಲ್ಲಿ ಈ ಸಮಾಜಗಳು ಹೊಂದಿದ ಕೌಶಲ್ಯ ಅದ್ಭುತ, ಕಬ್ಬಿಣದ ಲೋಹಗಾರಿಕೆಯಲ್ಲಿ ಇವರದು ಎತ್ತಿದ ಕೈ.

ಈ ಸಮಾಜದಲ್ಲಿ ಬಹು ಉಪಗುಂಪುಗಳಿದ್ದವು. ಸಂಪನ್ಮೂಲಗಳಿಗಾಗಿ ಈ ಪಂಗಡಗಳು ನಿರಂತರ ಸಂಘರ್ಷದಲ್ಲಿ ತೊಡಗಿದ್ದವು. ಕಬ್ಬಿಣದ ತಂತ್ರಜ್ಞಾನವನ್ನು ಕೇವಲ ಯುದ್ಧಗಳಿಗಾಗಿ ಮಾತ್ರ ಉಪಯೋಗಿಸಿದ ಈ ಸಮಾಜ ಕೃಷಿಯಲ್ಲಿ ಗಂಭೀರ ಪ್ರಗತಿ ಮಾಡಲಾಗಲಿಲ್ಲ. ಆದ್ದರಿಂದ ಹಲವು ಶತಮಾನಗಳ ಕಾಲ ಇವು ಜಡ ಸ್ಥಿತಿಯಲ್ಲಿದ್ದವು. ಈ ಕಬ್ಬಿಣ ಯುಗದ ಸಮಾಜಗಳು ಲೋಹ ಗಣಿಗಾರಿಕೆ ಬೆಲೆಬಾಳುವ ಹರಳು, ಗಣಿಗಾರಿಕೆಯಲ್ಲಿ ಪ್ರಖ್ಯಾತಿ ಪಡೆದಿದ್ದವು. ಇದರ ಸೂಚನೆ ಅರಿತ ಉತ್ತರ ಭಾರತದ ವೈದಿಕ, ಶೈವ, ಬೌದ್ಧ ವರ್ತಕರು ದಕ್ಷಿಣಾಪಥದ ಮೂಲಕ ವ್ಯಾಪಾರಕ್ಕೆ ಬರಲಾರಂಭಿಸಿದರು. ಇವರ ಜೊತೆ ಧರ್ಮ ಪ್ರಚಾರಕರು ಬಂದು ಉತ್ತರ ಭಾರತದಲ್ಲಿ ಹುಟ್ಟಿದ ಧರ್ಮಗಳನ್ನು ಈ ಬುಡಕಟ್ಟು ಸಮುದಾಯಗಳಿಗೆ ಪರಿಚಯಿಸಿದರು.

ಇದನ್ನರಿತ ಮೌರ್ಯ ದೊರೆ ಅಶೋಕ ಕೂಡ ಚಿನ್ನ, ಬೆಲೆಬಾಳುವ ಹರಳು, ಮುತ್ತು ಮತ್ತಿತರ ಸಂಪನ್ಮೂಲಗಳನ್ನು ಹುಡುಕುತ್ತಾ ಕರ್ನಾಟಕಕ್ಕೆ ಬಂದ. ಮೌರ್ಯ ಪ್ರಭುತ್ವ ಕರ್ನಾಟಕದಲ್ಲಿ ಪ್ರಾಕೃತ ಭಾಷೆ, ಬ್ರಾಹ್ಮೀ ಲಿಪಿಯನ್ನು ಪರಿಚಯಿಸಿತು. (ಕಿ.ಪೂ.೩೦೦-೧೦೦)ರ ಸಮಯದಲ್ಲಿ ಕಬ್ಬಿಣಯುಗದ ಬುಡಕಟ್ಟು ಸಮುದಾಯಗಳು ವೈದಿಕ, ಜೈನ, ಬೌದ್ದನಂಬಿಕೆಗಳನ್ನು ಉತ್ತರಭಾರತದ ಭೌತಿಕ ಸಂಸ್ಕೃತಿಯ ಅಂಶಗಳನ್ನು ಪ್ರಭುತ್ವದ ಕೆಲವು ಪರಿಕರಗಳನ್ನುಉಪಯೋಗಿಸುವುದನ್ನು ಕಲಿತವು. ಇದೆಲ್ಲಾ ಮುಂದಿನ ಬೆಳವಣಿಗೆ ಅಡಿಪಾಯವಾಯಿತು.

## ನೇಗಿಲಕೃಷಿ, ವಾಣಿಜ್ಯೀಕರಣ -ನಗರೀಕರಣ-ನಾಗರಿಕತೆಯೆಡೆಗೆ

ಸುಮಾರು (ಕ್ರಿ.ಪೂ. ೧೦೦ ರಿಂದ ಕ್ರಿ.ಶ. ೪೦೦)ರವರೆಗಿನ ಕಾಲ ಶಾತವಾಹನ ಕದಂಬ ಯುಗ ಕರ್ನಾಟಕದ ಇತಿಹಾಸದಲ್ಲಿ ಒಂದು ಪ್ರಮುಖ ಹಂತ. ಈ ಕಾಲಘಟ್ಟದಲ್ಲಿ ಸಮಾಜ ಕೆಲವು ತೀವ್ರತರ ಬದಲಾವಣೆಗೆ ಒಳಗಾಯಿತು.

ಪುರಾತತ್ವ ಮತ್ತು ಸಾಹಿತ್ಯಕ ಆಧಾರಗಳಿನ್ನಿಟ್ಟು ನೋಡಿದಾಗ ಈ ಕಾಲಘಟ್ಟದಲ್ಲಿ ಹೊಸ ಪ್ರದೇಶಗಳಲ್ಲಿ ಜನವಸತಿಗಳು ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಜನಸಂಖ್ಯೆ ಕೂಡ ಹೆಚ್ಚಾಗಿರಬೇಕು. ಇದುವರೆಗೆ ಕೇವಲ ಯುದ್ಧಗಳಿಗೆ ಬಳಕೆಯಾಗುತ್ತಿದ್ದ ಕಬ್ಬಿಣದ ಸಲಕರಣೆಗಳು ಈಗ ಕೃಷಿಗೆ ಬಳಕೆಯಾಗಲು ಪ್ರಾರಂಭವಾದವು. ಕಬ್ಬಿಣದ ನೇಗಿಲು, ಗುದ್ದಲಿ, ಕತ್ತಿಗಳ ಬಳಕೆ ಪ್ರಾರಂಭವಾಯಿತು. ಇದು ಕಪ್ಪು ಮಣ್ಣನ್ನು ಉಳುಮೆ ಮಾಡಲು, ಅನುಕೂಲವಾಯಿತು. ಈ ಕಾಲದ ಒಂದು ಕೃತಿ ಗಾಥಾಸಪ್ತಶತಿ, ಸಮೃದ್ಧ ಭತ್ತದ ತೆನೆಯಿಂದ ತುಂಬಿದ ಗದ್ದೆಗಳನ್ನು ವರ್ಣಿಸುತ್ತದೆ. ಭತ್ತ, ರಾಗಿ, ಜೋಳ, ಕಿರು ಧಾನ್ಯಗಳು ಮುಂತಾದ ಬಹುಬೆಳೆಗಳನ್ನು ಬೆಳೆಯಲಾಯಿತು. ನೇಗಿಲುಗಳನ್ನು ದಾನ ಮಾಡುವುದು ಪುಣ್ಯದ ಕೆಲಸವೆಂದು ತಿಳಿಯಲಾಯಿತು.

ನೀರಾವರಿ ತಂತ್ರಜ್ಞಾನ ಕೂಡ ಅಭಿವೃದ್ಧಿಯಾಯಿತು. ನದಿ, ಬಾವಿ, ಕೆರೆ ಸರೋವರಗಳು ಉಪಯುಕ್ತ ನೀರಾವರಿ ಮೂಲಗಳು. ಕೆರೆ ತೋಡುವುದು, ದುರಸ್ತಿಗೊಳಿಸುವುದು ಪುಣ್ಯದ ಕೆಲಸವೆಂದು ಶಾಸನಗಳು ತಿಳಿಸುತ್ತವೆ. ಮಳೆಗಾಲದಲ್ಲಿ ಕೆರೆಗಳಲ್ಲಿ ತುಂಬಿಟ್ಟ ನೀರನ್ನು ಚಿಕ್ಕ ಕಾಲುವೆಗಳ ಮೂಲಕ ಗದ್ದೆಗಳಿಗೆ ಹರಿಸುವ ತಿಳುವಳಿಕೆ ಬಂತು. ಪಂಚಾಂಗದ ಜ್ಞಾನ, ನಕ್ಷತ್ರ ಜ್ಞಾನ ಋತುಗಳ ಅರಿವು ಕೃಷಿಕರಿಗೆ ಅನುಕೂಲವಾಯಿತು. ಬಾವಿಯಿಂದ ನೀರೆತ್ತಲು ರಹಟ್ಟಗಡಿಯ (ಅರಘಟ್ಟ)ವೆಂಬ ಮಡಿಕೆಗಳಿಂದ ಮಾಡಿದ ಮಾಲೆ ಉಪಯೋಗಿಸುವ ತಂತ್ರಜ್ಞಾನ ಬಳಕೆಗೆ ಬಂದ ಬಗ್ಗೆ ಶಾಸನಗಳು ತಿಳಿಸುತ್ತವೆ. ಕೃಷಿ ಮಾನವನನ್ನು ಅಲೆಮಾರಿ ಜೀವನ ಬಿಟ್ಟು ಸ್ಥಿರ ಗ್ರಾಮಗಳಲ್ಲಿ ವಾಸಿಸುವಂತೆ ಮಾಡಿತು.

ಈ ನೇಗಿಲ ಕೃಷಿ ಸಂಸ್ಕೃತಿ ಸಮಾಜದಲ್ಲಿ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯಾಗಲು ಕಾರಣವಾಯಿತು. ಈ ಹೆಚ್ಚುವರಿ ಉತ್ಪಾದನೆ ಸಮುದಾಯಗಳಲ್ಲಿದ್ದ ಸಮಾನತೆಯನ್ನು ಒಡೆದು ಸಂಪತ್ತಿನ ಅಸಮಾನ ಹಂಚಿಕೆಗೆ ಕಾರಣವಾಗುತ್ತದೆ. ಪುರೋಹಿತರು ಮತ್ತು ಆಡಳಿತಗಾರರು ಮಿಗತೆಯ ಬಹುಪಾಲು ಪಡೆಯುತ್ತಾರೆ. ಕೃಷಿಕರು ಕರ್ಮಕಾರರು ಶೋಷಣೆಗೆ ಒಳಪಡುತ್ತಾರೆ. ಇದರ ಪರಿಣಾಮವೇ ಸಮಾಜದಲ್ಲಿ ತೀವ್ರಗತಿಯ ವರ್ಗೀಕರಣ ಮತ್ತು ಶ್ರೇಣಿಕರಣ ಉಂಟಾಗುತ್ತದೆ. ಇದುವರೆಗೆ ಸಮುದಾಯದ ಹಕ್ಕಿಗೊಳಪಟ್ಟ ಭೂಮಿ ಈಗ ಕೆಲವೇ ವ್ಯಕ್ತಿಗಳ ಖಾಸಗೀ ಭೂಮಿಯಾಯಿತು.

ಭೂಮಿ ಕೂಡ ಒಂದು ಮೌಲ್ಯ ಕೊಟ್ಟು ಖರೀದಿಸುವ ವಸ್ತು ಆಯಿತು. ಜೊತೆ ಜೊತೆಗೆ ಭೂರಹಿತ ಕಾರ್ಮಿಕರ ತೋಳಿನ ಬಲ ಕೂಡ ಖರೀದಿಯ ವಸ್ತುವಾಯಿತು. ಸಾಮುದಾಯಿಕ ಆಸ್ತಿಯ ಪರಿಕಲ್ಪನೆ ವಿಘಟನೆಯಾಗಿ ಖಾಸಗಿ ಆಸ್ತಿಯ ಉಗಮ ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತ ಭೂಮಾಲಕ ವರ್ಗವೊಂದು ಉದಯಿಸಿತು. ಅವರೇ ಗಹಪತಿಗಳು. ಈ ಗಹಪತಿಗಳು ತಮ್ಮ ಹೊಲದಲ್ಲಿ ತಾವೆ ದುಡಿಯುತ್ತಿದ್ದರು. ಕೆಲವೊಮ್ಮೆ ಕರ್ಮಕಾರರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಇವರು ಪ್ರಧಾನ ತೆರಿಗೆದಾರರು ಹೌದು. ಗ್ರಾಮದ ಮುಖಂಡತ್ವವನ್ನು ಇವರಿಗೆ ಕೊಡಲಾಗುತ್ತಿತ್ತು. ಇವರು ವಿಶೇಷ ಸಾಮಾಜಿಕ ಸ್ಥಾನಮಾನಕ್ಕಾಗಿ ಹಾತೊರೆಯುತಿದ್ದರು. ಬೌದ್ಧ ಸಂಘಗಳಿಗೆ ವಿಶೇಷವಾಗಿ ದಾನ ಕೊಟ್ಟವರಲ್ಲಿ ಈ ವರ್ಗ ಪ್ರಧಾನವಾಗಿದೆ. ಬೌದ್ಧ ಧರ್ಮ ಇವರಿಗೆ ವಿಶೇಷ ಮಾನ್ಯತೆ ಕೊಟ್ಟಿತ್ತು. ಸಮುದಾಯ ಆಸ್ತಿ ವಿಘಟನೆಯಾದ ಇನ್ನೊಂದು ಮುಖ ಎಂದರೆ ಭೂರಹಿತ ದಾಸ ಕರ್ಮಕಾರ ವರ್ಗದ ಸೃಷ್ಟಿ.

ಸಮಾಜದಲ್ಲಿ ಸೃಷ್ಟಿಯಾದ ಮಿಗತೆ ಉತ್ಪನ್ನ ಪೂರ್ಣಕಾಲಿಕ ಕರಕುಶಲ ವರ್ಗವೊಂದು ಸೃಷ್ಟಿಯಾಗಲು ಸಹಾಯಕವಾಯಿತು. ಶಾತವಾಹನ ಕಾಲೀನ ಶಾಸನಗಳು ಹಲವಾರು ಕರಕುಶಲಕರ್ಮಿಗಳನ್ನು ಹೆಸರಿಸುತ್ತದೆ. ತೆಲ್ಲಿಗರು, ಗಂಧಿಕರು, ಸ್ವರ್ಣಕಾರ, ಮಾಲಕಾರರು, ಬಡಗಿ, ಚರ್ಮಕಾರರು, ನೇಕಾರರು, ಕಟ್ಟಡ ನಿರ್ಮಾಣಗಾರರು, ಲೋಹಕಾರರು, ಶಿಲ್ಪಿಗಳು ಇತ್ಯಾದಿ. ಇವರೆಲ್ಲಾ ತಮ್ಮದೇ ಆದ ಶ್ರೇಣಿಗಳನ್ನು ರಚಿಸಿಕೊಂಡಿದ್ದರು. ದಾನವನ್ನು ಕೊಡುವ ಸ್ಥಿತಿಗತಿ ಪಡೆದಿದ್ದರು. ರೋಮ್ ಸಾಮ್ರಾಜ್ಯದೊಡನೆ ವೃದ್ಧಿಸುತ್ತಿದ್ದ ವ್ಯಾಪಾರ ಇದಕ್ಕೆ ಸಹಾಯವಾಯಿತು. ಶಾತವಾಹನ ಕಾಲೀನ ಸಣ್ಣ ಮೌಲ್ಯದ ಸತುವಿನ, ತಾಮ್ರದ ಮತ್ತು ಪೊಟಿನ್ ನಾಣ್ಯಗಳು ವಾಣಿಜ್ಯಕರಣವನ್ನು ತೀವ್ರಗೊಳಿಸಿದವು.

ಕ್ರಿ.ಶ.ದ ಮೊದಲೇ ಶತಮಾನದಲ್ಲಿ ಹಿಪ್ಪಲಸ್ ಎಂಬ ನಾವಿಕ ಕಂಡುಹಿಡಿದ ಮಾರುತಗಳಚಲನೆಯನ್ನಾಧರಿ, ರೋಮನ್ ಹಡಗುಗಳು ದಕ್ಷಿಣ ಭಾರತದ ಪೀಠಗಳಿಗೆ ಬರುವ ಪ್ರಮಾಣ ಹೆಚ್ಚಾಯಿತು. ನಮ್ಮ ಕಾಡು ಉತ್ಪನ್ನ ಮತ್ತು ಸಿದ್ಧ ವಸ್ತುಗಳಿಗೆ ಅವರಿಂದ ಬಹಳ ಬೇಡಿಕೆ ಇತ್ತು.

ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಸೃಷ್ಟಿಯಾದ ಹೆಚ್ಚುವರಿ ಉತ್ಪನ್ನ ವ್ಯಾಪಾರಕ್ಕೆ ಕಾರಣವಾಯಿತು, ಬಲಿಷ್ಮಪಟ್ಟಿ ಮತ್ತು ಸಾರ್ಥ ವಾಹಗಳನ್ನು ಅಂದಿನ ಕಾಲದ ಶಾಸನಗಳು ಹೆಸರಿಸುತ್ತವೆ. ಈ ವರ್ತಕರ ಸಂಘ ಅಥವಾ ಶ್ರೇಣಿಗಳಿದ್ದವು, ಈ ಸಂಘಗಳು ಬ್ಯಾಂಕ್ ಆಗಿ ಕೂಡ ವರ್ತಿಸುತ್ತಿದ್ದವು. ಠೇವಣಿಗೆ ಬಡ್ಡಿ ಕೊಡುತ್ತಿದ್ದವು, ಸಾಲಕ್ಕೆ ಬಡ್ಡಿ ವಸೂಲಿ ಮಾಡುತ್ತಿದ್ದು, ಬೌದ್ಧ ಸಂಘಗಳ ಜೊತೆ ದರ್ಶಕ ಶ್ರೇಣಿಗಳು ಅನ್ಯೋನ್ಯ ಸಂಬಂಧ ಹೊಂದಿದ್ದವು. ಆದುದರಿಂದ ದಕ್ಷಿಣ ಭಾರತದ ಹಲವು ಕಡೆ ವ್ಯಾಪಾರಿ ಮಾರ್ಗಗಳ ಬದಿಯಲ್ಲಿ ಬೌದ್ಧ ಸಂಘಗಳು ಕಂಡು ಬರುತ್ತವೆ, ಯಾವುದೇ ಕಾಲಘಟ್ಟದಲ್ಲಿ ಸಮಾಜದಲ್ಲಿ ಸೃಷ್ಟಿಯಾದ ಹೊಸ ವರ್ಗಗಳು ಹೊಸ ಪಂಥಗಳಿಗೆ ವಿಶೇಷವಾಗಿ ಪ್ರೋತ್ಸಾಹಿಸುತ್ತವೆ. ಪ್ರತಿಯಾಗಿ ಹೊಸ ಮತ, ಧರ್ಮಗಳು ಹೊಸದಾಗಿ ಏಳಿಗೆಗೆ ಬಂದ ವರ್ಗಗಳಿಗೆ ಸ್ಥಾನಮಾನಾದಿಗಳನ್ನಿತ್ತು ಗೌರವಿಸುತ್ತದೆ. ಕೃಷಿ ವಿಸ್ತರಣೆ, ಕರಕುಶಲ ಮಸ್ತುಗಳ ವಿಪರೀತ ಉತ್ಪಾದನೆ, ಆಂತರಿಕ ಮತ್ತು ವಿದೇಶಿ ವ್ಯಾಪಾರ, ನಾಣ್ಯಗಳ ಚಲಾವಣೆ, ಶ್ರೇಣಿಗಳು, ಸಾರ್ಥವಾಹಗಳು ಇದೆಲ್ಲದರ ಪರಿಣಾಮದೇ ಕರ್ನಾಟಕವೂ ಸೇರಿದಂತೆ ದಖ್ಖನ್ನಲ್ಲಿ ನಗರೀಕರಣ ವೇಗವಾಗಿ ಬೆಳೆಯಿತು. ಭೂ ಉತ್ಖನನಗಳು ಕರ್ನಾಟಕದ ಬನವಾಸಿ, ವಡಗಾಂವ್ - ಮಾಧವಪುರ, ಸನ್ನತಿ, ಕಾಕನಕೋಟೆ, ಚಂದ್ರವಳ್ಳಿ, ಬ್ರಹ್ಮಗಿರಿ, ಹೆಮ್ಮಿಗೆ ಮುಂತಾದ ಕಡ ನಗರಗಳು ಅಸ್ತಿತ್ವದಲ್ಲಿದ್ದನ್ನು ದೃಢೀಕರಿಸಿದೆ.

## ನಗರಗಳ ಹಿನ್ನಡೆ - ಕೃಷಿ ವಿಸ್ತರಣೆ -ಸ್ವಯಂಪೋಷಣಾ ಗ್ರಾಮಗಳು - ಊಳಿಗಮಾನ್ಯ ಪದ್ಧತಿಯೆಡೆಗೆ |

ಕರ್ನಾಟಕದ ಬ್ರಹ್ಮಗಿರಿ, ಚಂದ್ರವಳ್ಳಿ, ಸನ್ನತಿ, ಸಾತನಿಕೋಟ, ವಡಗಾಂ-ಮಾದವಪುರ, ಹೆಮ್ಮಿಗೆ ಮುಂತಾದ ನಗರಗಳು ಕ್ರಿ.ಶ. ಐದನೇ ಶತಮಾನದ ಕಾಲಕ್ಕೆ ಅವನತಿಯಾಗಿರುವುದು ಪುರಾತತ್ವ ಆಧಾರಗಳಿಂದ ತಿಳಿಯುತ್ತದೆ. ಇಡೀ ವ್ಯವಸ್ಥೆ ನಿಧಾನವಾಗಿ ನಗರೀಕರಣದಿಂದ ಪುನಃ ಗ್ರಾಮೀಣಿಕರಣದತ್ತ ಚಲಿಸಿರುವುದು ಸಮಕಾಲೀನ ಶಾಸನಗಳಿಂದ ತಿಳಿಯುತ್ತದೆ. ರೋಮನ್ ವರ್ತಕ ರಾಗಲೀ ಅವರ ಮಡಿಕೆ ಸಂಸ್ಕೃತಿ ಹಾಗೂ ಚಿನ್ನದ ನಾಣ್ಯಗಳಾಗಲಿ ಇನ್ನು ಮುಂದೆ ಕಾಣಸಿಗುವುದಿಲ್ಲ. ಶಾತವಾಹನರಷ್ಟು ಸಣ್ಣ ಮೌಲ್ಯದ ತಾಮ್ರ, ಸತು, ಪೊಟಿನ್ ನಾಣ್ಯಗಳನ್ನು ಮುಂದಿನ ಚಾಲುಕ್ಯ ರಾಷ್ಟ್ರಕೂಟರು, ಗಂಗರು ಹೊರಡಿಸಿದಂತೆ ಕಾಣುವುದಿಲ್ಲ. ಸಣ್ಣ ಮೌಲ್ಯದ ನಾಣ್ಯಗಳಿಲ್ಲವೆಂದರೆ ಜನ ಸಾಮಾನ್ಯರಲ್ಲಿ ಹಣ ಚಲಾವಣೆ ಕಡಿಮೆಯಾಗಿದೆ ಎಂದು ಅರ್ಥ. ಕರಕುಶಲಕರ್ಮಿಗಳ ಸಂಘಗಳಾಗಿ, ವರ್ತಕ ಸಂಘಗಳಾಗಿ ದುರ್ಬಲವಾದಂತೆ ಕಾಣುತ್ತದೆ. ವರ್ತಕ-ಕರಕುಶಲ ಕರ್ಮಿಗಳ ಬೆಂಬಲ ಪಡೆದಿದ್ದ ಬೌದ್ಧ ಸಂಘಗಳು ನಿಧಾನವಾಗಿ ಕಣ್ಮರೆಯಾಗಿರುವುದು ಈ ಕಾಲದ ಮಹತ್ವದ ಸಂಗತಿಯಾಗಿದೆ. ಈ ಮೇಲಿನ ಪ್ರಕ್ರಿಯೆಗಳು ಸಮಾಜವನ್ನು ಊಳಿಗಮಾನ್ಯ ವ್ಯವಸ್ಥೆಯತ್ತ ಚಲಿಸುವಂತೆ ಮಾಡಿದವು.

ಕರಕುಶಲ ಕೈಗಾರಿಕೆ ಮತ್ತು ದೂರದ ವ್ಯಾಪಾರ ಅವನತಿ ಯಾದಾಗ ಸಹಜವಾಗಿ ನಗರಗಳ ಅವನತಿಯಾಯಿತು. ನಗರ ವಾಸಿಗಳು ಹಳ್ಳಿಗಳತ್ತ ಚಲಿಸುವಂತಾಯಿತು. ಜೀವನಕ್ಕೆ ಇತರ ವೃತ್ತಿಗಳಿಲ್ಲದೆ ಕೃಷಿ ಭೂಮಿಯ ಮೇಲೆ ಒತ್ತಡ ಹೆಚ್ಚಾಯಿತು. ಮಾರುಕಟ್ಟೆ ಆಧಾರಿತ ಆರ್ಥಿಕತೆ ಮತ್ತು ನಾಣ್ಯದ ಕೊರತೆಯಿಂದ ಬ್ರಾಹ್ಮಣರಿಗೆ ಮತ್ತು ಸೇನಾಧಿಕಾರಿಗಳಿಗೆ ಗ್ರಾಮಗಳಲ್ಲಿ ಕೃಷಿ ಭೂಮಿಯನ್ನು ಭೂದಾನವಾಗಿ ಕೊಡುವ ಸಂಪ್ರದಾಯ ಜಾರಿಗೆ ಬಂದಿತ್ತು.

ಕರ್ನಾಟಕದ ಪ್ರಾಚೀನ ಶಾಸನಗಳನ್ನು ಗಮನಿಸಿದರೆ ಈ ಭೂದಾನ ಕೊಡುವ ಪದ್ಧತಿ ಒಂದೇ ಸಮನೆ ಹೆಚ್ಚಾಗುತ್ತ ಹೋಗಿರುವುದು ಕಂಡು ಬರುತ್ತದೆ. ಗ್ರಾಮ,ಗ್ರಾಮಗಳಲ್ಲೂ ಈ ತರಹ ಭೂದಾನ ಕೊಟ್ಟ ಅಗ್ರಹಾರಗಳು, ಬ್ರಹ್ಮಪುರಿಗಳು ಕಂಡು ಬರುತ್ತವೆ. ಇದೇ ರೀತಿ ೭ನೇ ಶತಮಾನದ ನಂತರ ಸೇನಾಧಿಕಾರಿಗಳು ಹಣದ ಬದಲಿಗೆ ಭೂಹಿಡುವಳಿಗಳನ್ನು ಉಂಬಳಿಯಾಗಿ ಪಡೆದರು. ಈ ಹೊತ್ತಿಗಾಗಲೇ ವೈದಿಕ ಧರ್ಮ ರೂಪಾಂತರಗೊಂಡು ಒಂದು ಧರ್ಮವಾಗಿ ದೇವಾಲಯ ಸಂಸ್ಕೃತಿ ಮತ್ತು ಮೂರ್ತಿ ಪೂಜೆ ಸ್ಥಾಪಿತವಾಗಿದ್ದವು, ಈ ದೇವಾಲಯಗಳಿಗೆ, ಬಸದಿಗಳಿಗೆ ಭೂಮಿಯನ್ನು ಉಳ್ಳವರು ಉಂಬಳಿಯಾಗಿ ಕೊಡುವ ಪದ್ಧತಿ ಹುಟ್ಟಿ ಬಂದಿತು. ಇದರಿಂದಾಗಿ ಅಗ್ರಹಾರ, ಬ್ರಹ್ಮಪುರಿ,

ದೇವಾದಾನ, ಅಧಿಕಾರಿಗಳಿಗೆ ಕೊಟ್ಟ ಉಂಬಳಿ ಭೂಮಿ ಮತ್ತು ಖಾಸಗಿ ಭೂಮಾಲಿಕ ರೈತರ ಸಂಖ್ಯೆ ಒಂದೇ ಸಮನೆ ಏರತೊಡಗಿತು. ಇವರಾರು ಬಿಸಿಲಲ್ಲಿ ಕೆಲಸ ಮಾಡುವವರಲ್ಲ, ಆ ಭೂಮಿಯಲ್ಲಿ ವಾಸಿಸುತ್ತಿದ್ದ ಜನ ಈಗ ಗೇಣಿದಾರರಾಗಿ, ಕಾರ್ಮಿಕರಾಗಿ ಶೋಷಣೆಗೆ ಒಳಗಾದರು.

ಕೃಷಿ ಭೂಮಿಯ ಮೇಲಿನ ಒತ್ತಡ ಪಕ್ಕದ ಅರಣ್ಯ ಪ್ರದೇಶವನ್ನು (ಅರಣ್ಯಕರ್ಷಣ) ಕೃಷಿ ಭೂಮಿಯಾಗಿ ಮಾರ್ಪಡಿಸುವುದಕ್ಕೆ ಪ್ರಚೋದಿಸಿತು. ಹಲವಾರು ಶಾಸನಗಳು ಅರಣ್ಯಕರ್ಷಣವನ್ನು ಉಲ್ಲೇಖಿಸುತ್ತವೆ. ಇಂತಹ ಸಂದರ್ಭದಲ್ಲಿ ಗ್ರಾಮ ನಾಗರಿಕರಿಗೂ ಅರಣ್ಯಕ ಸಮುದಾಯಗಳಿಗೂ ಸಂಪರ್ಕ ಏರ್ಪಟ್ಟು ದುರ್ಬಲ ಅರಣ್ಯ ಸಮುದಾಯಗಳು ಶೂದ್ರ ಕೃಷಿಕರಾಗಿ ವರ್ಣಾಶ್ರಮ ವ್ಯವಸ್ಥೆಯಡಿ ಸೇರುತ್ತಾ ಹೋದರು. ಆಯುಧ ಬಳಕೆಯಲ್ಲಿ ನಿಸ್ಸೀಮರಾದ ಅರಣ್ಯಕರ ಸಮುದಾಯ ಮುಖ್ಯಸ್ಥರು ಪುರೋಹಿತ ವರ್ಗದ ಬೆಂಬಲದಿಂದ ಹಿರಣ್ಯಗರ್ಭದಂತಹ ವಿಧಿ ಮಾಡಿಸಿಕೊಂಡು ಕ್ಷತ್ರಿಯರೆನಿಸಿಕೊಂಡರು.

ಕೃಷಿಕ ಸಮಾಜದ ವಿಸ್ತರಣೆ ಮತ್ತು ಅರಣ್ಯಕ ಸಮುದಾಯಗಳಲ್ಲಿ ಒಂದು ವರ್ಗೀಕರಣವಾದ ಪರಿಣಾಮವೇ ಅನೇಕ ಹೊಸಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಪ್ರಭುತ್ವಗಳು ಸೃಷ್ಟಿಯಾದವು. ಈ ಚಿಕ್ಕ ಪ್ರಭುತ್ವಗಳು ಧಾರ್ಮಿಕ ಮುಖಂಡರ ಮತ್ತು ಸ್ಥಾಪಿತ ಶಕ್ತಿಶಾಲಿ ಪ್ರಭುತ್ವಗಳ ಮನ್ನಣೆ ಪಡೆದು ಸ್ಥಾನಮಾನಗಳನ್ನು ವೃದ್ಧಿಸಿಕೊಂಡವು. ದಕ್ಷಿಣ ಭಾರತದಲ್ಲಿ ವರ್ಣಾಶ್ರಮ ಪದ್ಧತಿ ಆಚರಣೆಯಲ್ಲಿಲ್ಲದಿದ್ದರೂ, ಸ್ಥಳೀಯರನ್ನು ಗ್ರಾಮ ಗ್ರಾಮಗಳಲ್ಲಿದ್ದ ಅಗ್ರಹಾರಗಳು ವರ್ಣಾಶ್ರಮದ ರೂಪಾಂತರವಾದ ಜಾತಿ ವ್ಯವಸ್ಥೆಯಲ್ಲಿ ವಿಲೀನಗೊಳಿಸಿದವು. ಸ್ಥಳೀಯ ಕೃಷಿಕರು, ಪಶುಪಾಲಕರು, ಕರಕುಶಲ ಕರ್ಮಿಗಳೂ ಮತ್ತು ಅರಣ್ಯ ಬುಡಕಟ್ಟುಗಳೂ ಹಿಂದು ಜಾತಿಪದ್ಧತಿಯೊಳಗೆ ನಿಧಾನವಾಗಿ ಸೇರಿಕೊಳ್ಳುವಾಗ ಅವರ ನಂಬಿಕೆ, ಆಚರಣೆ, ದೇವರುಗಳು, ವಿಧಿ ವಿಧಾನಗಳು ಹಿಂದು ಧರ್ಮದೊಳಗೆ ಸೇರಿಕೊಂಡವು. ಆದರೆ ಆಚರಣೆಗಳನ್ನು ವೈದಿಕ ಸಂಪ್ರದಾಯದ ಯಜಮಾನ್ಯಕ್ಕೆ ಒಳಪಡಿಸಲಾಯಿತು ಅಷ್ಟೆ

ಈ ಸಂಕೀರ್ಣ ಸಾಮಾಜಿಕ ಪ್ರಕ್ರಿಯೆಯ ಪರಿಣಾಮವೇ ಕ್ರಿ.ಶ.ಐದನೇ ಶತಮಾನ ನಂತರ ಜಾತಿ, ಉಪಜಾತಿಗಳ ಸಂಖ್ಯೆಯಲ್ಲಿವಿಪರೀತ ಹೆಚ್ಚಳ. ಸ್ವಯಂ ಪೂರ್ಣ ಗ್ರಾಮಗಳಲ್ಲಿ ಚಲನಶೀಲತೆಯನ್ನು ಕಳೆದುಕೊಂಡು ಬದುಕುತ್ತಿದ್ದ ಪ್ರತಿಯೊಂದು ವೃತ್ತಿ ಗುಂಪು ಒಂದೇ ತರಹದ ಜೀವನ ಪದ್ಧತಿ, ನಂಬಿಕೆ, ಆಚರಣೆಗಳನ್ನು ಬೆಳೆಸಿಕೊಂಡವು. ಮುಂದೆ ಇದೇ ಒಂದು ಜಾತಿ ಅಥವಾ ಉಪಜಾತಿ ಆಯಿತು. ಅನೇಕ ವೃತ್ತಿ ಶ್ರೇಣಿಗಳು, ಬುಡಕಟ್ಟುಗಳು ಜಾತಿಯಾಗಿ ಮಾರ್ಪಟ್ಟವು. ಆದರೆ ಇಂತಹ ಬಹುತೇಕ ಪಂಗಡಗಳಿಗೆ ಶೂದ್ರ ಜಾತಿಯೆಂದು ನಿರ್ಧರಿಸಲ್ಪಟ್ಟು ಶೂದ್ರ ಜನಸಂಖ್ಯೆ ಒಂದೇ ಸಮನೆ ಏರುತ್ತಾ ಬಂದಿತು. ಹಾಳು ಭೂಮಿ, ಕೃಷಿಯಲ್ಲಿ ತೊಡಗಿ ಅರಣ್ಯ ಕಡಿದು ಕೃಷಿ ಮಾಡಿ ಹಲವು ಶೂದ್ರ ಜಾತಿಗಳು ಕೃಷಿಕರೆನಿಸಿ ಕೊಂಡರು.

ಶೂದ್ರರು ಕೃಷಿಕರಾದಾಗ ಅವರ ಸ್ಥಿತಿಗತಿ ಮೊದಲಿಗಿಂತ ಸುಧಾರಿಸಿತು. ಕೆಲವರಲ್ಲಿ ಸಂಪತ್ತು ಸಂಗ್ರಹಿಸಿತ್ತು. ಅವರು ದಾನ ಧರ್ಮ ಮಾಡುವ ಸ್ಥಿತಿಗೂ ಬಂದಿದ್ದರು. ಆಗ ಹಿಂದೂ ಧರ್ಮದ ಹಲವು ಪಂಥಗಳು ಶೂದ್ರರಿಗೂ ಹಲವು ಧಾರ್ಮಿಕ ಆಚರಣೆಗಳನ್ನು ಮಾಡಲು ಅಧಿಕಾರ ಕೊಟ್ಟವು. ಅವರ ಧಾರ್ಮಿಕ ಆಚರಣೆಗಳನ್ನು ಚರ್ಚಿಸುವ ಶೂದ್ರ ಧರ್ಮ ಬೋಧಿನಿ, ಶೂದ್ರಾಚಾರ ಚಿಂತಾಮಣಿ, ಶೂದ್ರಾಚಾರ ಶಿರೋಮಣಿ ಯಂತಹ ಧರ್ಮ ಗ್ರಂಥಗಳ ರಚನೆಯಾಯಿತು. ಈ ಕಾಲದ ಮುಖ್ಯ ಧಾರ್ಮಿಕ ಬೆಳವಣಿಗೆಯೆಂದರೆ ಶೂದ್ರರ ದಾನ ಕೊಡುವ ಹಕ್ಕಿಗೆ ಒತ್ತು ಕೊಟ್ಟಿದ್ದು, ಅವರೆಲ್ಲಾ ಆಕಾಂಕ್ಷೆಗಳೂ ದಾನ ಕೊಡುವುದರಿಂದ ಪೂರೈಸುತ್ತವೆ ಎಂದು ತಿಳಿಸಲಾಯಿತು. ಹಾಗಾಗಿ ಈ ಕಾಲಘಟ್ಟದಲ್ಲಿ ಸಮಾಜದಲ್ಲಿ ಸ್ಥಗಿತತೆ ಉಂಟಾಯಿತು. ಮಾರುಕಟ್ಟೆ ಶಕ್ತಿಗಳು ಕ್ಷೀಣಿಸಿ, ಸ್ವಂತಕ್ಕಾಗಿ ಮಾತ್ರ ಉತ್ಪಾದನೆ ಎನ್ನುವಂತಾಯಿತು. ಕೃಷಿ ಭೂಮಿಯ ಮೇಲೆ ಹೆಚ್ಚಿನ ಒತ್ತಡ ಬಿತ್ತು. ಒಂದು ತುಂಡು ಭೂಮಿಯ ಮೇಲೆ ಹಲವಾರು ಜನ ಬೇರೆ ಬೇರೆ ತರಹದ ಹಕ್ಕುಗಳನ್ನು ಹೊಂದುವಂತಾಯಿತು. ಪ್ರಭುತ್ವಗಳು ತಮ್ಮ ಹಲವು ಅಧಿಕಾರಗಳನ್ನು ಬಿಟ್ಟುಕೊಟ್ಟವು. ಕರ ಕುಶಲಕರ್ಮಿಗಳು ಸಾಮಾಜಿಕ ಸ್ಥಾನಮಾನವನ್ನು ಗ್ರಾಮೀಣಿಕರಣದಿಂದ ಕಳೆದುಕೊಂಡು ದೇವಾಲಯಗಳು, ಭೂಮಾಲಿಕರ ಅಡಿಯಾಳಾಗಿ ದುಡಿಯಬೇಕಾಯಿತು. ಭಕ್ತಿ, ಸ್ವಾಮಿನಿಷ್ಠೆ ದೈನ್ಯತೆ, ಇನ್ನೊಬ್ಬ ಒಡೆಯನ ಕೃಪೆಯಲ್ಲಿ ಬದುಕುವುದು ಭೂಮಾಲಿಕನ ಸೇವೆಯಲ್ಲಿ ಸುಖ ಕಾಣುವುದು ಸಾಮಾಜಿಕ ಮೌಲ್ಯಗಳಾದವು.

**ಸಮಾಜದಲ್ಲಿ ಸಂಚಲನ-ಕೈಕಸುಬುಗಳ ಕ್ರಿಯಾಶೀಲತೆ, ವ್ಯಾಪಾರದಲ್ಲಿ ವೃದ್ಧಿ ಪುನಃ ನಗರೀಕರಣದತ್ತ (೧೧ನೇ ಶತಮಾನ-೧೬ನೇಶತಮಾನ)**

ಹೊಯ್ಸಳ, ವಿಜಯನಗರ ಆಡಳಿತ ಕಾಲಘಟ್ಟವನ್ನು ಹಿಂದಿನ ಚಾಲುಕ್ಯ, ಗಂಗರು, ರಾಷ್ಟ್ರಕೂಟರ ಕಾಲದೊಂದಿಗೆ ಹೋಲಿಸಿ ನೋಡಿದಾಗ ನಮಗೆ ಬದಲಾವಣೆಗಳು ಕಾಣಿಸುತ್ತವೆ. ಹನ್ನೊಂದನೆ ಶತಮಾನದಿಂದ ಹದಿನಾರನೇ ಶತಮಾನದ ಕರ್ನಾಟಕದ ಸಾಹಿತ್ಯ ಮತ್ತು ಪುರಾತತ್ವ ಆಧಾರಗಳನ್ನಿಟ್ಟು ನೋಡಿದಾಗ ಪುನಃ ಸಮಾಜ ಮಾರುಕಟ್ಟೆ ಆಧಾರಿತ ಆರ್ಥಿಕತೆ, ಸಮೃದ್ಧ ನಾಣ್ಯ ಚಲಾವಣೆ, ಕೈಕಸುಬುದಾರರ ಹೆಚ್ಚಳ, ವ್ಯಾಪಾರಿಕರಣ ಮತ್ತು ನಗರಗಳ ಬೆಳವಣಿಗೆ ಆಗಿರುವುದು ಕಂಡು ಬರುತ್ತದೆ.

ಬ್ರಾಹ್ಮಣ ಸಭಾಗಳು ಮತ್ತು ದೇವಾಲಯಗಳು ತಮ್ಮಲ್ಲಿ ಸಂಗ್ರಹವಾದ ಸಂಪತ್ತನ್ನು ಸಾಲದ ರೂಪದಲ್ಲಿ ಬಡ್ಡಿ ವಿಧಿ ವಿತರಿಸುತ್ತಿದ್ದ ಉದಾಹರಣೆಗಳು ಸಿಗುತ್ತವೆ. ಸಾಲಕ್ಕೆ ಬೇಡಿಕೆ, ಬಡ್ಡಿ ವ್ಯವಹಾರ, ಬಡ್ಡಿದರದಲ್ಲಿ ಹೆಚ್ಚಳ ಶಾಸನಗಳಲ್ಲಿ ಕಂಡು ಬರುವ ಅಂಶ. ಈ ಕಾಲಘಟ್ಟದಲ್ಲಿ ಪುನಃ ಸಣ್ಣಮೌಲ್ಯದ ತಾಮ್ರದ ನಾಣ್ಯಗಳ ಚಲಾವಣೆ ಕೂಡ ಹೆಚ್ಚಾದಂತೆ ಕಂಡುಬರುತ್ತದೆ. ಈ ವಾದವನ್ನು ಪುಷ್ಟೀಕರಿಸುವಂತೆ ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಟಂಕಸಾಲೆಗಳು ನಿರ್ಮಾಣವಾಗಿರುವುದು ಬೆಳಕಿಗೆ ಬಂದಿದೆ. ಅಂದಿನ ಕಾಲದಲ್ಲಿದ್ದ ಒಟ್ಟು ೯ ಟಂಕಸಾಲೆಗಳಲ್ಲಿ ೬ ಟಂಕಸಾಲೆಗಳು ಉತ್ತರ ಕರ್ನಾಟಕದಲ್ಲಿ ಕಂಡುಬಂದಿದೆ. ಟಂಕಸಾಲೆ ಇದ್ದ ಊರಿನ ಹೆಸರನ್ನೆ ನಾಣ್ಯಕ್ಕೆ ಇಡಲಾಗುತ್ತಿತ್ತು. (ಬಾರ್ಕೂರು ಗದ್ಯಾಣ, ಮಂಗಳೂರು ಗದ್ಯಾಣ, ಲಕ್ಕುಂಡಿ ಗದ್ಯಾಣ) ಸಮಾಜದಲ್ಲಿ ಸಿದ್ಧವಸ್ತುಗಳ ಚಲನಶೀಲತೆ ಹೆಚ್ಚಾಗಿರುವುದನ್ನು ನಾವು ಸುಂಕದ ಕಟ್ಟೆಗಳ ಹೆಚ್ಚಳ ವಾಗಿರುವುದರಿಂದ ತಿಳಿಯಬಹುದು. ಔಷಧ, ಬಟ್ಟೆ, ಸಂಬಾರ ಪದಾರ್ಥ, ಸುಗಂಧ ದ್ರವ್ಯ, ಎಣ್ಣೆ, ಬೆಲ್ಲ, ಕಲ್ಲುಸಕ್ಕರೆ, ಹರಳುಗಳು ಧಾನ್ಯ ಅಡಿಕೆ ವೀಳ್ಯದೆಲೆಗಳ ಮೇಲೆ ಸುಂಕವನ್ನು ವಸೂಲಿ ಮಾಡಲಾಗುತ್ತಿತ್ತು. (ಪೆರ್ಜುಂಕ, ವಡ್ಡಲಾವುಳಸುಂಕ)

ಇನ್ನೊಂದು ಈ ಕಾಲದ ಬೆಳವಣಿಗೆ ಸಂತೆಗಳ ಸ್ಥಾಪನೆ, ಸಭಾಗಳು ಮಹಾಜನರು, ಶ್ರೀಮಂತರು, ಆಡಳಿತಗಾರರು ದೇವಾಲಯಗಳು ತಮ್ಮ ತಮ್ಮ ಊರಿನಲ್ಲಿ ಸಂತೆಮಾರುಕಟ್ಟೆ ಸ್ಥಾಪನೆಗೆ ಜಾಗವನ್ನು ಹಣವನ್ನು ತೆರಿಗೆ ರಿಯಾಯಿತಿಯನ್ನು ಕೊಡ ಮಾಡುತ್ತಿದ್ದರು. ಇಂತಹ ಕೆಲಸ ಕಾರ್ಯಗಳು ಊಳಿಗಮಾನ್ಯ ಆರ್ಥಿಕತೆಯಲ್ಲಿ ಚಲನಶೀಲತೆಯನ್ನು ತಂದವು.

ವಾತಾವರಣ ಮಾರುಕಟ್ಟೆ ಆರ್ಥಿಕತೆಯ ಬೆಳವಣಿಗೆಗೆ ಪೂರಕವಾಯಿತು. ಇದುವರೆಗೆ ಭೂಮಾಲಿಕನ ಸುಪರ್ದಿಗೊ ಸಭಾ, ಮಹಾಜನ ಅಥವಾ ದೇವಾಲಯದ ಸುಪರ್ದಿಗೆ ಒಳಪಟ್ಟು ಸ್ವಾತಂತ್ರ್ಯ ಕಳೆದುಕೊಂಡಿದ್ದ ನೇಕಾರ, ಸ್ವರ್ಣಕಾರ, ದರ್ಜಿ, ಚಮ್ಮಾರ, ಬಡಗಿ, ಕಮ್ಮಾರ, ತೆಲ್ಲಿಗ ಕುಂಬಾರರಂತಹ ವೃತ್ತಿ ಪರಿಣಿತರು ಸ್ವಲ್ಪಮಟ್ಟಿನ ಚೇತರಿಕೆ ವೃತ್ತಿ ಸ್ವಾತಂತ್ರ್ಯ, ಸಾಮಾಜಿಕ ಸ್ಥಾನಮಾನ ಪಡೆದುಕೊಂಡವು. ಈ ಸಂದರ್ಭದಲ್ಲಿ ತಮಿಳುನಾಡಿನ ಕೈಕಸುಬುದಾರರು ಇಡಂಗೈ ಗುಂಪಾಗಿ ಸಂಘಟನೆ ಹೊಂದಿದರು ತಮ್ಮ ಗೌರವದ ಸ್ಥಾನಮಾನಕ್ಕಾಗಿ ಪೈಪೋಟಿ ನಡೆಸಿದರು. ಸ್ವರ್ಣಕಾರ, ಬಡಗಿ, ಶಿಲ್ಪಿ, ಲೋಹಕಾರರು ತಮ್ಮನ್ನು ರಥಕಾರ ಗುಂಪಿನವರೆಂದು ಪರಿಗಣಿಸಲು ಮನವಿ ಸಲ್ಲಿಸಿದರು. ಕರ್ನಾಟಕ ದಲ್ಲಿ ೧೨ನೇ ಶತಮಾನದಲ್ಲಿ ನಡೆದ ಲಿಂಗಾಯತ ಚಳುವಳಿಯಲ್ಲಿ ಬಹುದೊಡ್ಡ ಬೆಂಬಲ ವರ್ತಕರು ಮತ್ತು ಕರಕುಶಲ ಕರ್ಮಿಗಳಿಂದ ಬಂದಿದೆ. ತಮ್ಮ ಹಳೆಯ ನಿರ್ಬಂಧಗಳನ್ನು ತ್ಯಜಿಸಿ ಹೊಸ ಸ್ವತಂತ್ರ ವ್ಯವಸ್ಥೆ ಮತ್ತು ಸಾಮಾಜಿಕ ಸ್ಥಾನಮಾನಕ್ಕಾಗಿ ಈ ವರ್ಗಗಳು ಲಿಂಗಾಯತ ಚಳುವಳಿಯನ್ನು ಬೆಂಬಲಿಸಿದವು. ದಕ್ಷಿಣ ಕರ್ನಾಟಕ ದಲ್ಲಿ ಶ್ರೀ ರಾಮಾನುಜರ ಶ್ರೀ ವೈಷ್ಣವ ಪಂಥ ಕೆಳವರ್ಗದವರಿಗೆ ಬಾಗಿಲು ತೆರೆದಾಗ ಹಲವು ವರ್ಗಗಳು ಈ ಹೊಸ ಪಂಥವನ್ನು ಬೆಂಬಲಿಸಿದವು. ತಾವು ಗಳಿಸಿದ ಸಂಪತ್ತನ್ನು ಹೊಸ ಪಂಥಗಳಿಗೆ ನೀಡಿ ತಾವು ಸ್ಥಾನಮಾನಗಳನ್ನು ಪಡೆದವು.

ಈ ವ್ಯಾಪಾರೀಕರಣ ಮತ್ತು ವಾಣಿಜ್ಯಕರಣದಿಂದ ದೂರ ದೇಶಗಳಿಂದ ಹಲವು ವರ್ತಕ ಸಮುದಾಯಗಳು ಕರ್ನಾಟಕಕ್ಕೆ ಬಂದು ನೆಲೆಸಿದವು. ಆಂತರಿಕ ಮತ್ತು ದೂರ ದೇಶದ ವ್ಯಾಪಾರ ವೃದ್ಧಿಸಿತು. ವರ್ತಕರು ಸಂಘ ಅಥವಾ ಶ್ರೇಣಿಗಳನ್ನು ಸ್ಥಾಪಿಸಿದರು. ಈ ಸಂಘಗಳ ಮೂಲಕ ದೇವಾಲಯ ಕಟ್ಟುವುದು, ಕೆರೆಕಟ್ಟುವುದು ಸಂತೆ ಸ್ಥಾಪಿಸುವುದು

ಸಾಲ ವಿತರಿಸುವುದು, ಬಡ್ಡಿ ವಸೂಲಿ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡಿದವು. ನಾನಾದೇಶಿ, ಉಭಯ ನಾನಾದೇಶಿ ಮುಮ್ಮರಿದಂಡ, ವೀರಭಣಜಿಗ, ಗವರೆ, ಗಾತ್ರಿಕ ಸೆಟ್ಟಿಕಾರ, ವಡ್ಡವ್ಯವಹಾರಿ ಮುಂತಾದ ವರ್ತಕ ಗುಂಪುಗಳು ಅಂದಿನ ಪ್ರಭಾವಿ ಶಕ್ತಿಗಳು ಇವರಲ್ಲಿ ಸಂಪತ್ತು ಎಷ್ಟಿತ್ತೆಂದರೆ, ರಾಜನಿಗೆ ಸಾಲ ಕೊಡುತ್ತಿದ್ದರು. ರಾಜ ಕಟ್ಟಿಸಿದ ದೊಡ್ಡ ದೇವಾಲಯಗಳನ್ನು ಇವರು ಕೂಡ ನಿರ್ಮಿಸುತ್ತಿದ್ದರು. ಇವರ ಪ್ರಭಾವವನ್ನರಿತು ಕೇವಲ ಭೂಮಾಲಿಕರನ್ನು ಮಾತ್ರ ಓಲೈಸುತ್ತಿದ್ದ ರಾಜರು ವರ್ತಕರನ್ನು ಗೌರವಿಸಿ ಪ್ರಮುಖ ನಗರಗಳ ಪಟ್ಟಣಸ್ವಾಮಿಗಳನ್ನಾಗಿ ನೇಮಿಸುತ್ತಿದ್ದರು. ಆಂತರಿಕ ಮತ್ತು ಬಾಹ್ಯ ವ್ಯಾಪಾರ ವಿಸ್ತರಿಸಿದಂತೆ ರಾಜನ ಬೊಕ್ಕಸಕ್ಕೆ ಹಣ ಹರಿದು ಬಂತು. ಇದೆಲ್ಲದರ ಫಲವಾಗಿ ಕರ್ನಾಟಕದಲ್ಲಿ ಇನ್ನೊಮ್ಮೆ ನಗರೀಕರಣ ಪ್ರಕ್ರಿಯೆ ಪ್ರಾರಂಭ ವಾಯಿತು. ಶಾಸನಗಳ ಸಹಾಯದಿಂದ ೩೫-೪೦ ಅಂದಿನ ನಗರಗಳನ್ನು ಪತ್ತೆ ಹಚ್ಚಬಹುದು.

# Bibliography


1. **Allchin, F. R. *Neolithic Cattle-Keepers of South India*. Cambridge University Press, 1963.**
2. **Appadorai, A. *Economic Conditions in Southern India (1000-1500 A.D.)*. 1990.**
3. **Chidananda Murthy, M. *Kannada Shashanagala Samskrithika Adhyayana*. 1966.**
4. **Gururajachar, S. *Some Aspects of Economic and Social Life in Karnataka (A.D 1000-1300)*. 1974.**
5. **Hirematha, B. R. *Shasanagalalli Karnatakada Vartakaru* . 1989.**
6. **Kuppuswamy, G. R. *Economic Conditions in Karnataka, A.D. 973-A.D. 1336*. Dharwar : Karnatak University, 1975.**
7. **Moorti, U. S. *Megalithic Culture of South India, Socio -Economic Perspective* . Ganga -Kaveri , 1994.**
8. **Nandi, Ramendra Nath. *Social Roots of Religion in Ancient India*. 1986.**
9. **Parasher-Sen, Aloka. *Social and Economic History of Early Deccan*. South Asia Books, 1993.**
10. **Prabhu, Ramadasa. *State Formation in Early Deccan Unpublished Ph.D Thesis Submitted to Mangalore University* . 2004.**
11. **Prasad, Om Prakash. *Decay and Revival of Urban Centres in Medieval South India*. 1989.**
12. **Ray, Himanshu Prabha. *Monastery and Guild*. 1986.**
13. **Sharma, Ram Sharan. *Indian Feudalism, C. AD 300-1200*. Macmillan, 2009.**
14. **Sundara, A. *Typology of Megalithic Culture in South India*.**
15. **Thakur, Hema. *Archeology In Karnataka (300BC-300AD) Unpublished M.Phil Thesis Submitted to Delhi University* . 1998.**